**ದಿನಾಂಕಃ 04.12.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಂದುವರೆದ ಪಾಟೀ ಸವಾಲು: ಅರ್ಜಿದಾರರ ಪರ ವಕೀಲರಾದ ಶ್ರೀಮತಿ.ವಿ.ಪಿ. ರವರಿಂದಃ**

1) ಮಧ್ಯಂತರ ಅರ್ಜಿಯ ಮೇಲೆ ಈ ಪ್ರಕರಣದಲ್ಲಿ ಒಂದು ವಿಚಾರಣೆ ನಡೆದಿದೆ ಎಂದರೆ ಸರಿ. ಸದರಿ ಮಧ್ಯಂತರ ಅರ್ಜಿಯ ಮೇಲಿನ ವಿಚಾರಣೆ ಸಮಯದಲ್ಲಿ ನಾನು ಯಾವುದೇ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರ ನೀಡಿಲ್ಲ ಎಂದರೆ ಸುಳ್ಳು. ಈ ಪ್ರಕರಣದ ಎಲ್ಲಾ ಸಂಗತಿಗಳು ನನಗೆ ತಿಳಿದಿದೆ.

2) ಈ ಪ್ರಕರಣದಲ್ಲಿ ಅರ್ಜಿದಾರರು ಒಂದು ವಿಭಾಗ ಪತ್ರವನ್ನು ಹಾಜರುಪಡಿಸಿದ್ದಾರೆ ಮತ್ತು ಆ ದಾಖಲೆಯು ಈಗಾಗಲೇ ನಿ.ಪಿ.9 ಎಂದು ಗುರುತು ಆಗಿದೆ ಎಂದರೆ ಆ ಬಗ್ಗೆ ನನಗೆ ತಿಳಿದಿಲ್ಲ.

3) ನಿ.ಪಿ.9 ದಾಖಲೆಯ ಮೂಲಕ ಅರ್ಜಿ ಸ್ವತ್ತು ಅಂದರೆ ಈ ಪ್ರಕರಣದಲ್ಲಿ ಇರುವಂತಹ ಅರ್ಜಿ ಸ್ವತ್ತು ಅರ್ಜಿದಾರರಾದ ವೈಶಾಖ್ ಜಿ ಸಪ್ಪೆ ರವರ ಭಾಗಾಂಶಕ್ಕೆ ಹೋಗಿದೆ ಎಂದರೆ ಸುಳ್ಳು.

4) ನಿ.ಪಿ.1 ಎಂದು ಗುರುತು ಆಗಿರುವ ದಾಖಲೆಯ ಪ್ರಕಾರ ಶ್ರೀ ಗವಿರಂಗಪ್ಪ

ರವರು ನನಗೆ **Letter of Attornament** ಅನ್ನು ದಿ.**15.03.2019** ರಂದು ನನಗೆ ಕಳುಹಿಸಿದ್ದಾರೆ ಎಂದರೆ ಸುಳ್ಳು.

5) **2019** ನೇ ಇಸವಿಯ ವೇಳೆಗೆ ಗವಿರಂಗಪ್ಪ ರವರ ಬಳಿ ಅಡ್ವಾನ್ಸ್ ಹಣ ಅಂದರೆ ನಾವು ಗವಿರಂಗಪ್ಪ ರವರಿಗೆ ಮುಂಗಡವಾಗಿ ನೀಡಿದ್ದಂತಹ **80** ಸಾವಿರ ರೂಪಾಯಿ ಹಣವು ಗವಿರಂಗಪ್ಪ ರವರ ಬಳಿಯೇ ಇತ್ತು ಎಂದರೆ ಸರಿ. ನಾವು ಮುಂಗಡವಾಗಿ ನೀಡಿದ್ದಂತಹ **80** ಸಾವಿರ ರೂಪಾಯಿಗಳನ್ನು ಪಡೆದುಕೊಂಡಿರುವುದಿಲ್ಲ ಎಂಬ ನಿಲುವನ್ನು ಗವಿರಂಗಪ್ಪ ರವರು ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ.

6) **2019** ನೇ ಇಸವಿಯಲ್ಲಿಯೇ ಓರ್ವ ತಿಲಕ್ ಟೆಕ್ಸ್ಟೈಲ್ ಎಂಬ ಅಂಗಡಿಯ ಬಳಿಯಲ್ಲಿಯೇ ನಾನು ಗವಿರಂಗಪ್ಪ ರವರನ್ನು ಉದ್ದೇಶಿಸಿ "ವಿಭಾಗ ಪತ್ರವನ್ನು ಕೊಡಿ" ಎಂದು ಕೇಳಿದೆನು.

7) ನಾನು ಹೇಳಿದ ಹಾಗೆ ವಿಭಾಗ ಪತ್ರವನ್ನು ಕೊಡಿ ಎಂದು ನಾನು ಕೇಳಿರುವುದಿಲ್ಲ ಮತ್ತು ಈ ಸಂಬಂಧವಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

8) **2019** ನೇ ಇಸವಿಯಲ್ಲಿಯೇ ಗವಿರಂಗಪ್ಪ ರವರು ಸ್ವತ್ತನ್ನು ತಮ್ಮ ಮಗನಿಗೆ

ಕೊಟ್ಟಿದ್ದೇವೆ ಮತ್ತು ಬಾಡಿಗೆ ಹಣವನ್ನು ನಮ್ಮ ಮಗನಿಗೆ ಕೊಡಿ ಎಂದು ಹೇಳಿದರು, ಆಗ ನಾನು ಬಾಡಿಗೆ ಹಣದ ಚೆಕ್ಕನ್ನು ಗವಿರಂಗಪ್ಪ ರವರಿಗೆ ಕಳುಹಿಸಿದೆನು ಆದರೆ ಗವಿರಂಗಪ್ಪ ರವರು ಆ ಚೆಕ್ಕನ್ನು ಪಡೆದುಕೊಳ್ಳಲಿಲ್ಲ ನಂತರ ನಾನು ಅರ್ಜಿದಾರರ ಹೆಸರಿಗೆ ಚೆಕ್ಕನ್ನು ಕಳುಹಿಸಿಕೊಟ್ಟೆನು. ಸದರಿ ಚೆಕ್ಕನ್ನು ಅಂದರೆ ನಿ.ಪಿ.**5** ದಾಖಲೆಯನ್ನು ಅರ್ಜಿದಾರರು ನಗದೀಕರಣ ಮಾಡಿಕೊಳ್ಳಲಿಲ್ಲ ಮತ್ತು ನನ್ನನ್ನು ಉದ್ದೇಶಿಸಿ "ನೀವು ಬಂದು ಬಾಡಿಗೆ ಕರಾರು ಮಾಡಿಕೊಡಬೇಕು" ಎಂದು ಹೇಳಿದರು ಎಂದರೆ ಚೆಕ್ಕನ್ನು ಆತನು ನಗದೀಕರಣ ಮಾಡಿಕೊಳಲಿಲ್ಲ ಎಂಬುದು ನಿಜ ಆಗಿದೆ, ಆದರೆ ಉಳಿದ ಸಂಗತಿಗಳು ಸುಳ್ಳು ಸಂಗತಿಗಳು ಆಗಿದೆ.

9) ವಿಭಾಗ ಪತ್ರದಲ್ಲಿ ಬರೆದಿರುವ ವಿಷಯಗಳ ಪ್ರಕಾರ ಗವಿರಂಗಪ್ಪ ರವರು ಅರ್ಜಿ ಸ್ವತ್ತಿನ ಮಾಲೀಕರು ಆಗಿರುವುದಿಲ್ಲ. ಯಾವ ಸ್ಥಳದಲ್ಲಿ ಅರ್ಜಿ ಸ್ವತ್ತು ಇದೆಯೋ ಆ ಜಾಗವು ಸರ್ಕಾರದ ಆಸ್ತಿ ಆಗಿದೆ. ದಿ.**08.08.2019** ರಂದು ಬಿಬಿಎಂಪಿ ರವರು ಬಂದು ಅರ್ಜಿ ಸ್ವತ್ತನ್ನು ಅಳತೆ ಮಾಡಿದರು ಮತ್ತು ಈ ಆಸ್ತಿಯು ಬಿಬಿಎಂಪಿ ಯ ಆಸ್ತಿ ಆಗಿದೆ ಎಂದು ಹೇಳಿದರು.

10) ದಿ.**17.03.1997** ರಂದು ಗವಿರಂಗಪ್ಪ ರವರ ತಂದೆಯವರಾದ ಎನ್.ಸಿ ಪರಪ್ಪ ರವರು ಅರ್ಜಿ ಸ್ವತ್ತನ್ನು ನನಗೆ ಬಾಡಿಗೆಗೆ ಕೊಟ್ಟಿದ್ದಾರೆ ಮತ್ತು ಒಂದು ದಾಖಲೆಯನ್ನು ಬರೆದು ಕೊಟ್ಟಿದ್ದಾರೆ ಮತ್ತು ಸದರಿ

ದಾಖಲೆಯನ್ನು ನಾನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ.

11) **1999** ನೇ ಇಸವಿಯಿಂದಲೂ ನಾನು ನಿಯಮಿತವಾಗಿ ಶ್ರೀ ಗವಿರಂಗಪ್ಪ ರವರಿಗೆ ಬಾಡಿಗೆಯನ್ನು ಕೊಡುತ್ತಾ ಇದ್ದೆನು ಎಂದರೆ ಸರಿ.

12) **Letter of Attornament** ಅಂದರೆ ನಿ.ಪಿ.**1** ದಾಖಲೆಯನ್ನು ಕಳುಹಿಸಿದ ನಂತರ ನಾನು **6** ತಿಂಗಳ ಬಾಡಿಗೆಯನ್ನು ಒಟ್ಟಾಗಿ ನಿ.ಪಿ.**2** ಮತ್ತು **3** ಎಂದು ಗುರುತು ಆಗಿರುವ ಚೆಕ್ಕುಗಳ ಮೂಲಕ ಅರ್ಜಿದಾರರಿಗೆ ಕಳುಹಿಸಿಕೊಟ್ಟಿದ್ದೇನೆ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು "**3** ತಿಂಗಳ ಬಾಡಿಗೆಯನ್ನು ಒಂದು ಚೆಕ್ಕಿನ ಮೂಲಕ ಅರ್ಜಿದಾರರಾದ ವೈಶಾಖ್ ರವರಿಗೆ ಮತ್ತು **3** ತಿಂಗಳ ಬಾಡಿಗೆಯನ್ನು ಮತ್ತೊಂದು ಚೆಕ್ಕಿನ ಮೂಲಕ ಗವಿರಂಗಪ್ಪ ರವರಿಗೆ ಕಳುಹಿಸಿದ್ದೇನೆ" ಎಂದು ನುಡಿದಿದ್ದಾರೆ.

13) ಅರ್ಜಿ ಸ್ವತ್ತು ತಮ್ಮ ಸ್ವಂತದ ಉಪಯೋಗಕ್ಕೆ ಬೇಕಾಗಿದೆ ಮತ್ತು ಅರ್ಜಿ ಸ್ವತ್ತಿನಲ್ಲಿ ತನ್ನ ಅಕ್ಕ ರವರು ವಕೀಲರ ಕಛೇರಿಯನ್ನು ಪ್ರಾರಂಭ ಮಾಡಲು ಉದ್ದೇಶ ಹೊಂದಿದ್ದಾರೆ ಮತ್ತು ಆ ಕಾರಣದಿಂದ ಅರ್ಜಿ ಸ್ವತ್ತನ್ನು ಖಾಲಿ ಮಾಡಿಕೊಡಿ ಎಂದು ಅರ್ಜಿದಾರರಾದ ವೈಶಾಖ್ ರವರು ನನ್ನನ್ನು ಕೇಳಿಕೊಂಡಿದ್ದಾರೆ ಎಂದರೆ ಸುಳ್ಳು.

14) ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿದೆ.

15) ಈಗ ನಿ.ಪಿ.**2** ದಾಖಲೆಯನ್ನು ಮಾನ್ಯ ವಕೀಲರು ಈ ಸಾಕ್ಷಿದಾರರಿಗೆ ತೋರಿಸಿದ್ದಾರೆ ಮತ್ತು ನಂತರ "ಇದರಲ್ಲಿ ಇರುವ ಸಹಿಯು ನಿಮ್ಮ ಸಹಿ ಆಗಿದೆ" ಎಂದು ಸೂಚಿಸಿದ್ದಾರೆ ಅದಕ್ಕೆ ಸಾಕ್ಷಿಯು "ಹೌದು" ಎಂದು ನುಡಿದಿದ್ದಾರೆ. ಸದರಿ ಸಹಿಯನ್ನು ನಿ.ಪಿ.**2(**ಎ**)** ಎಂದು ಗುರುತಿಸಿದೆ.

16) ಈಗ ನಿ.ಪಿ.**6** ದಾಖಲೆಯನ್ನು ಮಾನ್ಯ ವಕೀಲರು ಈ ಸಾಕ್ಷಿದಾರರಿಗೆ ತೋರಿಸಿದ್ದಾರೆ ಮತ್ತು ನಂತರ "ಇದರಲ್ಲಿ ಇರುವ ಸಹಿಯು ನಿಮ್ಮ ಸಹಿ ಆಗಿದೆ" ಎಂದು ಸೂಚಿಸಿದ್ದಾರೆ ಅದಕ್ಕೆ ಸಾಕ್ಷಿಯು "ಹೌದು" ಎಂದು ನುಡಿದಿದ್ದಾರೆ. ಸದರಿ ಸಹಿಯನ್ನು ನಿ.ಪಿ.**6(**ಎ**)** ಎಂದು ಗುರುತಿಸಿದೆ.

17) **2019** ನೇ ಇಸವಿ ಏಪ್ರಿಲ್ ತಿಂಗಳಿನಿಂದ ನಾನು ಅರ್ಜಿ ಸ್ವತ್ತಿನಲ್ಲಿ ವಾಸವಿದ್ದರೂ ಸಹಾ ನಾನು ಅರ್ಜಿದಾರರಿಗೆ ಆಗಲೀ ಅಥವಾ ಅವರ ತಂದೆ ಆದ ಗಂವಿರಂಗಪ್ಪ ಅವರಿಗೆ ಆಗಲೀ ಯಾವುದೇ ಬಾಡಿಗೆಯನ್ನು ನೀಡಿರುವುದಿಲ್ಲ ಎಂದರೆ ಅರ್ಜಿದಾರರು ಆಗಲಿ ಅಥವಾ ಗವಿರಂಗಪ್ಪ ಆಗಲೀ ಅರ್ಜಿ ಸ್ವತ್ತಿನ ಮಾಲೀಕರು ಆಗಿರುವುದಿಲ್ಲ.

18) ನಾನು ಬಾಡಿಗೆ ಹಣವನ್ನು ಅರ್ಜಿದಾರರಿಗೆ ಕೊಡಬೇಕಾಗಿದೆ ಮತ್ತು ಅರ್ಜಿ ಸ್ವತ್ತನ್ನು ಖಾಲಿ ಮಾಡಿಕೊಡಬೇಕಾಗಿದೆ ಮತ್ತು ಅರ್ಜಿ ಸ್ವತ್ತು ಅರ್ಜಿದಾರರ ಸ್ವಂತದ ಉಪಯೋಗಕ್ಕೆ ಬೇಕಾಗಿದೆ ಎಂದರೆ ಸುಳ್ಳು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.